

### ಎಡದಿಂದ ಬಲಕ್ಕೆ

1. ಸಂಧ್ಯಾ ಸಮಯವೂ ಸೇರಿದಂತೆ ಆತನದು ಎಂದಿಗೂ ಸೇವಾ ಕಾರ್ಯವೇ 4
3. ಅರಮನೆಯ ಜನರಿಗೂ ನೆಮ್ಮದಿಯ ಖಾತ್ರಿ ಏನಿಲ್ಲ 3
4. ವರ್ಣನೆಗೆ ತಕ್ಕವನಲ್ಲ ಈ ವರ್ತಕ 3
6. ನೀವೇಣಿಸಿದಂತೆಯೇ ಎಲ್ಲರಿಗೂ ಹಂಚಿದ್ದು ಬೆಣ್ಣೆ ಪ್ರಸಾದ 4
7. ಮೃತ ಶರೀರದಂತೆ ಇದೇನು ಯೋಗ ಭಂಗಿ! 4
9. ಲಾಭ ತರಿಸುವ ಈ ಕ್ರಮವನ್ನು ಸರಳಗೊಳಿಸು 4
12. ಹಣವನ್ನು ಎಣಿಕೆ ಮಾಡುವಾಗ ತಪ್ಪು ಮಾಡಿದರೆಂದು ಯುದ್ಧವೇ ನಡೆಯಿತೇ? 4
14. ಅಲ್ಲಿ ಎದ್ದಿರುವ ಹೊಗೆಗೆ ಕಾರಣ ಅರ್ಥವೇ ಆಗುತ್ತಿಲ್ಲ 3
15. ಮೂರ್ತಿ ಪ್ರತಿಷ್ಠಾಪನೆಗೆ ಸರಿಯಾಗಿ ಬೀಸತೊಡಗಿತು ಮಳೆಗಾಳಿ 3
16. ತರಕಾರಿ ಸಾಗಿಸಲು ಇಂಥ ಬಂಡಿ ತುಂಬ ಸಹಾಯಕ 4

### ಮೇಲಿನಿಂದ ಕೆಳಕ್ಕೆ

1. ಆತನ ಸಂಪತ್ತನ್ನೆಲ್ಲ ದೇವರಿಗೆ ಒಪ್ಪಿಸಿದ್ದಾಯಿತು ಹೌದೇ? 4
2. ಲವ ಕುಶರ ನಡುವಣ ವ್ಯತ್ಯಾಸ ಅತ್ಯಲ್ಪ ಅಷ್ಟೇ 4
3. ಆಸಕ್ತಿ ಇದ್ದವರೆಲ್ಲ ಸೇವಿಸಬಹುದಾದ ಕಷಾಯ 3
5. ಸಕಲ ಶುಭ ಶುಭ ಕಾರ್ಯಗಳಲ್ಲೂ ಬಳಸುವ ಪೂಜಾ ಬಿಂದಿಗೆ 3
6. ಮೊದಲ ಸುತ್ತಿನಲ್ಲೇ ಮಾರಾಟವಾದದ್ದನ್ನೆಲ್ಲ ಹಾಗೆಂದು ದಾಖಲು ಮಾಡು 4
8. ರಾಜನಿಗೆ ಮಣಿದದ್ದನ್ನು ಸೂಚಿಸಲು ಒಪ್ಪಿಸಿದ ಗೌರವದ ಕಾಣಿಕೆ 4
10. ಓಲಗ ನುಡಿಸಿದವರಿಗೆಲ್ಲ ನೀಡಿದ್ದು ಖಾರದ ಸಾಂಬಾರ ವಸ್ತು 3
11. ಒಳ್ಳೆಯ ಮನಸ್ಸಿನವನಿಗೆ ಅದನ್ನೇ ಸೂಚಿಸುವ ಹೆಸರು 4
12. ಹೆಮ್ಮಾರಿ ಅಷ್ಟೇ ಅಲ್ಲ, ಹಿಡಿದ ಪಟ್ಟನ್ನು ಬಿಡದ ಗ್ರಾಮ ದೇವತೆ ಕೂಡ 4
13. ಹಂತಕರು ಬಳಸಿದ ಸಾಧನ ; ವಿಪರೀತ ಚೂಪು 3

---

## 31–10–2024 ಉತ್ತರಗಳು

**ಎಡದಿಂದ ಬಲಕ್ಕೆ**

1. ಸಮಾಧಾನ 3. ಪ್ರಮಾದ 4. ರಜತ 6. ನಳಪಾಕ 7. ಕನ್ನಡ 9. ಹುರುಪು 11. ಕಸರು 13. ಗುಣಕ 15. ನೆರೆಜನ 17. ಗಡಿಗೆ 18. ನಗರ 19. ಸುಧಾರಿಸು

**ಮೇಲಿನಿಂದ ಕೆಳಕ್ಕೆ**

1. ಸದನ 2. ನರಕ 3. ಪ್ರಸನ್ನ 5. ತಣ್ಣೀರು 7. ಕಳಂಕ 8. ಡಮರು 9. ಹುದುಗು 10. ಪುಳಕ 12. ಸಲಗ 14. ಣಮರ (= ರಮಣ ಹಿಂದುಮುಂದು) 15. ನೆಗೆಸು 16. ನನಸು

**ಪ್ರಶ್ನಾಂಕಣ**

## ಮ್ಯಾಮತ್ ಮತ್ತು ಮ್ಯಾಸ್ಟೋಡಾನ್: ಏನು ವ್ಯತ್ಯಾಸ?

ಮ್ಯಾಮತ್ (Mammoth) ಮತ್ತು ಮ್ಯಾಸ್ಟೋಡಾನ್ (Mastodon): ಇವೆರಡೂ ಸೊಂಡಿಲಿನ ಪ್ರಾಣಿಗಳ (Probosidians) ವರ್ಗಕ್ಕೇ ಸೇರಿವೆ. ಈ ಎರಡೂ ಪ್ರಾಣಿಗಳ ಎಲ್ಲ ಪ್ರಭೇದಗಳೂ ಸಂಪೂರ್ಣ ಅಳಿದು ಹೋಗಿವೆ. ಈ ಎರಡೂ ಪ್ರಾಣಿಗಳದೂ ದೈತ್ಯ ಗಾತ್ರ, ಬಲಿಷ್ಠ ಶರೀರ, ನಾಲ್ಕು ಕಾಲುಗಳು, ಒಂದು ಸೊಂಡಿಲು, ಬಾಗಿ ಬೆಳೆದ ಎರಡು ಕೋರೆ ಹಲ್ಲುಗಳು (ದಂತಗಳು). ಸ್ಥೂಲವಾಗಿ ಮೇಲ್ನೋಟಕ್ಕೆ ಸುಮಾರು ಒಂದೇ ರೂಪದಂತೆ ಕಂಡರೂ ವಾಸ್ತವವಾಗಿ ಇವೆರಡರ ನಡುವೆ ಹಲವಾರು ಅಂತರಗಳಿವೆ. ಪ್ರಮುಖವಾಗಿ:

- ಮ್ಯಾಮತ್‌ಗಳದು ಮ್ಯಾಸ್ಟೋಡಾನ್‌ಗಳಿಗಿಂತ ಭಾರೀ ಗಾತ್ರ, ಅಧಿಕ ಎತ್ತರ ಮತ್ತು ಅಧಿಕ ತೂಕ. ವಯಸ್ಕ ಮ್ಯಾಮತ್‌ಗಳದು ಕನಿಷ್ಠ 5ರಿಂದ 13 ಟನ್ ತೂಕ; ಮ್ಯಾಸ್ಟೋಡಾನ್‌ಗಳದು 5ರಿಂದ 8 ಟನ್ ತೂಕ. ಮ್ಯಾಸ್ಟೋಡಾನ್‌ಗಳ ಗರಿಷ್ಠ ಎತ್ತರ 10 ಅಡಿಯಾದರೆ ಮ್ಯಾಮತ್‌ಗಳದು 13 ಅಡಿ ಎತ್ತರ (ಮ್ಯಾಸ್ಟೋಡಾನ್ ಮತ್ತು ಮ್ಯಾಮತ್‌ಗಳ ಹೋಲಿಕೆಯನ್ನು ಚಿತ್ರ 1ರಲ್ಲೂ, ಮತ್ತು ಈಗಿನ ಆಫ್ರಿಕನ್ ಆನೆಯನ್ನು ಚಿತ್ರ 2ರಲ್ಲೂ ಗಮನಿಸಿ).
- ಕಟ್ಟಾ ಸಸ್ಯಾಹಾರಿಗಳಾಗಿದ್ದ ಇವೆರಡೂ ಪ್ರಾಣಿಗಳ ಪೈಕಿ ಮ್ಯಾಮತ್‌ಗಳು ಈಗ್ಗೆ ಎರಡು ದಶಲಕ್ಷ ವರ್ಷ ಹಿಂದಿನಿಂದ ಧರೆಯಲ್ಲಿ ಬಾಳು ನಡೆಸುತ್ತ ಬಂದು ಈಗ್ಗೆ ಸುಮಾರು ಹತ್ತು ಸಾವಿರ ವರ್ಷ ಹಿಂದೆ ನಿರ್ನಾಮವಾದುವು. ಮ್ಯಾಸ್ಟೋಡಾನ್‌ಗಳು ಈಗ್ಗೆ 5.3 ದಶಲಕ್ಷ ವರ್ಷ ಹಿಂದಿನಿಂದ ತೊಡಗಿ ಹತ್ತು ಸಾವಿರ ವರ್ಷ ಹಿಂದಿನ ಸುಮಾರಿಗೆ ಸಂಪೂರ್ಣ ಅಳಿದುಹೋದುವ (ಮೈತುಂಬ ರೋಮಗಳು ದಟ್ಟೈಸಿದ್ದ ವೂಲಿ ಮ್ಯಾಮತ್ ಪ್ರಭೇದ ಮಾತ್ರ 5800 ವರ್ಷ ಹಿಂದಿನವರೆಗೂ ಅಲ್ಪಸಂಖ್ಯೆಯಲ್ಲಿ ಉಳಿದಿದ್ದು ನಂತರ ನಿರ್ನಾಮವಾಯಿತು).




- ಮ್ಯಾಮತ್‌ಗಳ ಜೀವಿತಾವಧಿ ಅರವತ್ತರಿಂದ ಎಂಬತ್ತು ವರ್ಷ; ಮ್ಯಾಸ್ಟೋಡಾನ್‌ಗಳದು 60 ವರ್ಷ. ಮ್ಯಾಮತ್‌ಗಳ ಮೂಲ ನೆಲೆ ಆಫ್ರಿಕಾ, ಯೂರೋಪ್, ಏಷ್ಯಾ ಮತ್ತು ಉತ್ತರ ಅಮೆರಿಕ ಖಂಡಗಳಲ್ಲಿ ಹರಡಿತ್ತು. ಮ್ಯಾಸ್ಟೋಡಾನ್‌ಗಳ ಮೂಲ ನೆಲೆ ಆರಂಭದಲ್ಲಿ ಆಫ್ರಿಕಾ ಮತ್ತು ಏಷ್ಯಾ ಖಂಡಗಳಿಗೆ ಸೀಮಿತವಾಗಿದ್ದರೂ ಮುಂದೆ ಅವು ಉತ್ತರ ಅಮೆರಿಕ ಮತ್ತು ದಕ್ಷಿಣ ಅಮೆರಿಕ ಖಂಡಗಳಿಗೂ ವಲಸೆ ಪಯಣಗಳ ಮೂಲಕ ಹರಡಿ ಅಲ್ಲೂ ನೆಲಸಿದ್ದವು.
- ಮ್ಯಾಮತ್‌ಗಳಲ್ಲಿ ಏಳು ಪ್ರಭೇದಗಳಿದ್ದುವು: ಎಂ ಪ್ರೈಮಿಜೆನಿಯಸ್ (ವೂಲಿ ಮ್ಯಾಮತ್), ಎಂ ಪ್ಲಾನಿಫ್ರಾನ್ಸ್, ಎಂ ಮೆರಿಡಿಯೋನಾಲಿಸ್; ಎಂ ಇಂಪೆರೇಟರ್; ಎಂ ಜೆಫೆರ್ಸೋನಿ; ಎಂ. ಕೊಲಂಬಿ ಮತ್ತು ಎಂ. ಟ್ರೋಗಾನ್ತೇರೈ.
- ಮ್ಯಾಸ್ಟೋಡಾನ್ ಪ್ರಭೇದಗಳು ನಾಲ್ಕು: ಎಂ. ಮಾಥ್ವೆಸಿ; ಎಂ. ರಾಕಿ; ಎಂ. ಕೊಸೊ ಎನ್ಸಿಸ್ ಮತ್ತು ಎಂ. ಅಮೆರಿಕಾನಂ.

■ ಎನ್. ವಾಸುದೇವ್